ಫಾರೆಸ್ಟ್. 26

ಇಸ್ತಿಹಾರ್ನಾಮಾ.

ತಾರೀಖು 12ನೇ ಡಿಸೆಂಬರ್ 1902.

ನಂ. 407—3205, ಸ್ನ 1901ನೇ ಆಗಸ್ಟ್ 31ನೇ ಮಕ್ತುಂ 197—951ನೇ ನಂಬರ್ ಇಸ್ತಿಹಾರ್ನಾಮೆಗೆ ಬದಲಾಗಿ, 1900ನೇ ಇಸವಿಯ XIನೇ ನಂಬರ್ ಮೈಸೂರ ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 4ನೇ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಘನವನ್ನೆೃದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೆಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸರ್ವೆ ನಂಬರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು.	ಕೊಪ್ಪಾ ತಾಲ್ಲೂಕು ಮುದಿಗೆರೆ ಹೋಬಳಿ.	4¾ ಚದರ ಮೈಲಿಗಳು.	ಮುದಗುಣಿ.	ಸ್ಥಳ.—ಬಾಳೆಹೊನ್ನೂರು—ಯಡಹಳ್ಳಿ ರಸ್ತೆಗೂ ಮತ್ತು ಭದ್ರಾನದಿಗೂ ಮಧ್ಯೆ ಕೊಪ್ಪ ತಾಲ್ಲೂಕಿನ ಪೂರ್ವ ಎಲ್ಲೆಗಳಲ್ಲಿರುವ ಬಟ್ಟಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ.—ಕೊಳಲಿಯ ಸರ್ವೆ ನಂ. 36ರ ವಾಯುವ್ಯ ಮೂಲೆಯಿಂದ ಹೊರಟು ಲೈನು ಆಗ್ನೇಯದಿಕ್ಕಾಗಿ ಅದೇ ನಂಬರಿನ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಮತ್ತು ಸರ್ವೆ ನಂ. 17ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಪಶ್ಚಿಮ ಪಾರ್ಶ್ವದಲ್ಲಿ ಸರ್ವೆ ನಂ. 26ರನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಸರ್ವೆ ನಂ. 26ರ ಪಶ್ಚಿಮ ಮತ್ತು ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 133ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂ. 24ರ ಪೂರ್ವ ಪಾರ್ಶ್ವದ ಉದ್ದಕ್ಕೂ ಭದ್ರಾನದಿಯನ್ನು ಮುಟ್ಟುವ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಭದ್ರಾನದಿಯ ಉದ್ದಕ್ಕೂ ಮುದಗುಣಿಯ ಸರ್ವೆ ನಂ. 70ರ ಆಗ್ನೇಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಭದ್ರಾನದಿಯ ಉದ್ದಕ್ಕೂ ಯಡಹಳ್ಳಿ—ಬಾಳೆಹೊನ್ನೂರು ರಸ್ತೆಯನ್ನು ಸದರೀ ನದಿಯು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಮೇಲ್ಕಂಡ ಹೈರೋಡಿನ ಉದ್ದಕ್ಕೂ ಕೊಳಲಿ ಗ್ರಾಮದ ಸರ್ವೆ ನಂ. 41ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಕೊಳಲಿಯ ಸರ್ವೆ ನಂ. 25ರ ಪಶ್ಚಿಮ ಪಾರ್ಶ್ವದಲ್ಲಿರುವ ಸಂಣ ಹೊಳೆಯ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸೀಮೆಯ ಘನವನ್ನೆೃದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಅಂತಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂತಾ ಜಮೀನಿನ ಯಾವ ಫಾರೆಸ್ಟ್ ಉತ್ಪತ್ತಿಗಾದರೂ ಯಾವ ಮನುಷ್ಯ ನಿಂದಾಗಲಿ ನಷ್ಟವಾದಾಗುವ ಅಥವಾ ಅವನ ಪಕ್ಷವಾಗಿ ಇರುವದಾಗಿ ಹೇಳಿಕೊಳ್ಳುವ ಯಾವ ಹಕ್ಕುಗಳ ಇರುವಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತಿರ್ಮಾನಿಸಲು ಮತ್ತು ಮೇಲ್ಕಂಡ ರೆಗ್ಯುಲೇಷನಿನ IIನೇ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರವಾಗಿ ಅಮಲ್ ನಡಿಸಲು, ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ॥ ಬಿ. ರಾಮಸ್ವಾಮಿ ಅಯ್ಯರ್‌ಯವರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿರಬೇಕೆಂದು ಮೊಕರರ್ರಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸಹಾಯ ಮಾಡಲು ತತ್ಕಾಲದ ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರರು ಸರ್ಕಾರದ ತರ್ಫಿನಲ್ಲಿ ಹಾಜರು ಇರಬೇಕೆಂತಲೂ ಆಜ್ಞಾಪಿಸಿರುತ್ತಾರೆ.

3. ಮತ್ತು ಸದರೀ ರೆಗ್ಯುಲೇಷನಿನ 15ನೇ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆಯ ಘನವನ್ನೆೃದಿದ ಶ್ರೀಮನ್ಮಹಾರಾಜಾ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13, ಅಥವಾ 14ನೇ ಸೆಕ್ಷನ್‌ಗಳಂತೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯತಕ್ಕ ರವಿನ್ಯೂ ಇಲಾಖೆಯ ಆಫಿಸರರಾಗಿರಬೇಕೆಂದು ತತ್ಕಾಲದ ಕಡೂರು ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮೀಷನರನ್ನು ಮೊಕರರ್ರಾಡಿರುತ್ತಾರೆ.

ತಾರೀಖು 12ನೇ ಡಿಸೆಂಬರ್ 1902.

ನಂ. 410—3208, ಸ್ 1901ನೇ ಆಗಸ್ಟ್ 31ನೇ ವಮ್ತಂ 191—945ನೇ ನಂಬರ್ ಇಸ್ತಿಹಾರ್ನಾವೆಗೆ ಬದಲಾಗಿ 1900ನೇ ಇಸವಿಯ XIನೇ ನಂಬರ್ ಮೈಸೂರ ಸೀಮೆಯ ಫಾರೆಸ್ಟ್ ರೆಗ್ಯುಲೇಷ್ನ 4ನೇ ಸೆಕ್ಷನಿನ ವಿಧಿಗಳನುಸಂಸಿ ಮೈಸೂರ ಸೀಮೆಯ ಫಾರೆಸ್ಟ್ಸನ್ನೈರಿದ ಶ್ರೀಮ್ತ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟ್ಟಾಗಿ ವಿಧ್ಯಡತಕ್ಕದ್ದೆಂದು ಯೋಚಿಸಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕ್ಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಹೊಸೂರು.	ಯಡಿಹಳ್ಳಿ ಸುಬ್ ತಾಲ್ಲೂಕು ಯಡಿಹಳ್ಳಿ.	28¾ ಚದರ ಮೈಲಿಗಳು.	ಅರಂಬಳ್ಳಿ.	ಸ್ಥಳ.—ಪೂರ್ವಕ್ಕೆ ಶಿವಮೊಗ್ಗ—ಯಡಿಹಳ್ಳಿ ರಸ್ತೆಗೂ ಮತ್ತು ಪಶ್ಚಿಮಕ್ಕೆ ಯಡಿಹಳ್ಳಿ—ಮಂದಗದ್ದೆಗೂ ಮಧ್ಯೆ ಇರುವ ಮತ್ತು ಉತ್ತರಕ್ಕೆ ಶಿವಮೊಗ್ಗ ಡಿಸ್ಟ್ರಿಕ್ಟ್ ಸರಹದ್ದಿನ ಅಂಚಿನಲ್ಲಿರುವ ಫಾರೆಸ್ಟ್ ಜಮೀನಿನ ಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ.—ಕಣಬೂರು ಗ್ರಾಮದ ಸರ್ವೆ ನಂ. 64ನೇ ನಂಬರಿನ ನೈರುತ್ಯ ಮೂಲೆಯಿಂದ ಹೊರಟು ಲೈನು ಸರ್ವೆ ನಂ. 64 ವ 25 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 108ರ ಮಧ್ಯೆ ಸರ್ವೆ ನಂ. 107ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರಿನ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 106, 105, 104 ವ 103 ಇವುಗಳ ದಕ್ಷಿಣ ಪಾರ್ಶ್ವಗಳ ಮತ್ತು ಸರ್ವೆ ನಂ. 101ರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ಸರ್ವೆ ನಂ. 99ರ ಪಶ್ಚಿಮ, ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ಸರ್ವೆ ನಂ. 117ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಮತ್ತು ಸರ್ವೆ ನಂ. 114ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯದ ಮೂಲೆಗೆ ಹೋಗುತ್ತದೆ. ತರುವಾಯ ಉತ್ತರ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 97ರ ಮಧ್ಯೆ ಶಿವಮೊಗ್ಗ ಡಿಸ್ಟ್ರಿಕ್ಟಿನ ಹೊಸೂರು ಗ್ರಾಮದ ಅಂಚಿನಲ್ಲಿರುವ ಹೊಳೆಗೆ ಹೋಗುತ್ತದೆ. ಆಮೇಲೆ ಸುಮಾರು 3 ಫರ್ಲಾಂಗುಗಳ ವರೆಗೆ ಸದರೀ ಹೊಳೆಯ ಬಲದಡದ ಉದ್ದಕ್ಕೂ ಸರ್ವೆ ನಂ. 97ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರಿನ ಮತ್ತು ಕುಸಬೂರು ಗ್ರಾಮದ ಸರ್ವೆ ನಂ. 66 ವ 65 ಇವುಗಳ ಪೂರ್ವ ಪಾರ್ಶ್ವದ ಮತ್ತು ನೆಲಗದ್ದೆಯ ಸರ್ವೆ ನಂ. 125 ವ 126 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಶಿವಮೊಗ್ಗ—ಯಡಿಹಳ್ಳಿಯ ಹೈರೋಡನ್ನು ಮುಟ್ಟುವ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಮೇಲ್ಕಂಡ ಹೈರೋಡಿನ ಉದ್ದಕ್ಕೂ ವಿಟಲದ ಸರ್ವೆ ನಂ. 2ರ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಸರ್ವೆ ನಂ. 2 ವ 3 ಇವುಗಳ ಉತ್ತರ ಪಾರ್ಶ್ವಗಳ, ವಿಟಲದ ಸರ್ವೆ ನಂ. 4ರ ಉತ್ತರ ವ ಪಶ್ಚಿಮ ಪಾರ್ಶ್ವಗಳ, ಸರ್ವೆ ನಂ. 16ರ ಉತ್ತರ ವ ಪಶ್ಚಿಮ ಪಾರ್ಶ್ವಗಳ, ಸರ್ವೆ ನಂ. 60ರ ಪಶ್ಚಿಮ ಪಾರ್ಶ್ವದ, ಮತ್ತು ಸರ್ವೆ ನಂ. 83ರ ಉತ್ತರ ಪಾರ್ಶ್ವದ ಉದ್ದಕ್ಕೂ ಆಖೈರ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 35 ವ 52 ಇವುಗಳ ಮಧ್ಯೆ ಸರ್ವೆ ನಂ. 5ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 51ರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 50 ವ 49 ಇವುಗಳ ಪಶ್ಚಿಮ

ಷೆಡ್ಯೂಲ್. 24

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಬಾಕಿಯ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು.	ಯಡೆಹಳ್ಳಿ ಸಬ್ ತಾಲ್ಲೂಕು ಯಡೆಹಳ್ಳಿ.	28¾ ಚದರ ಮೈಲಿಗಳು.	ಅರಂಬಳ್ಳಿ.	ಪಾರ್ಶ್ವಗಳ, ಸರ್ವೆ ನಂ. 67ರ ವಾಯುವ್ಯ ವ ಪಶ್ಚಿಮ ಪಾರ್ಶ್ವಗಳ, ಸರ್ವೆ ನಂ. 39, 38 ವ 37 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ವಿಟಲದ ಸರ್ವೆ ನಂ. 35 ಮತ್ತು ಸುನಲವಾಣಿಯ ಸರ್ವೆ ನಂ. 115 ಇವುಗಳ ಮಧ್ಯೆ ಸರ್ವೆ ನಂ. 119ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 119 ವ 117 ಇವುಗಳ ಉತ್ತರ ಪಾರ್ಶ್ವಗಳ, ಸರ್ವೆ ನಂ. 65ರ ಪೂರ್ವ ಮತ್ತು ಉತ್ತರ ಪಾರ್ಶ್ವಗಳ, ಮತ್ತು ಸರ್ವೆ ನಂ. 68ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 71ರ ಮಧ್ಯೆ ಕಡಬಿನ ಬೈಲುವಿನ ಸರ್ವೆ ನಂ. 102ರ ಆಜ್ಞೇಯ ಪಾರ್ಶ್ವದಲ್ಲಿನ ಬಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಸರ್ವೆ ನಂ. 102ರ ಪೂರ್ವ ಪಾರ್ಶ್ವದ, ಸರ್ವೆ ನಂ. 100ರ ಪೂರ್ವ ವ ಉತ್ತರ ಪಾರ್ಶ್ವಗಳ ಮತ್ತು ಅದೇ ಗ್ರಾಮದ ಸರ್ವೆ ನಂ. 96, 95, 14, 18, 17, 23 ವ 25 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಯಡೆಹಳ್ಳಿ—ಮಂದಗದ್ದೆ ರಸ್ತೆಯನ್ನು ಮುಟ್ಟುವ ಆಖೈರ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಲ್ಲಿಂದ ಮೇಲ್ಕಂಡ ಹೈರೋಡಿನ ಉದ್ದಕ್ಕೂ ಮುತ್ತಿನ ಕೊಪ್ಪದ ಸರ್ವೆ ನಂ. 16ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಕೆಶಲಾಪುರದ ದಕ್ಷಿಣ ಪಾರ್ಶ್ವದ, ಸರ್ವೆ ನಂ. 11, 12 ವ 15 ಇವುಗಳ ದಕ್ಷಿಣ ಪಾರ್ಶ್ವಗಳ ಮತ್ತು ಮುತ್ತಿನ ಕೊಪ್ಪದ ಸರ್ವೆ ನಂ. 15, 14 ವ 3 ಇವುಗಳ ಪೂರ್ವಪಾರ್ಶ್ವದ ಉದ್ದಕ್ಕೂ ಮುತ್ತಿನ ಕೊಪ್ಪಕ್ಕೆ ಹೋಗುವ ಭಂಡಿ ಜಾಡನ್ನು ಮುಟ್ಟುವ ಆಖೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಕಣಬೂರಿಗೆ ತಿರಿಗಿಕೊಂಡು ಹೋಗುವ ಪದವಿಗೆ ಮೇಲ್ಕಂಡ ಭಂಡಿಜಾಡಿನ ಉದ್ದಕ್ಕೂ ಹೋಗುತ್ತದೆ. ಆ ಮೇಲೆ ಕಣಬೂರಿಗೆ ಹೋಗುವ ಭಂಡಿಜಾಡಿನ ಉದ್ದಕ್ಕೂ ಮುತ್ತಿನ ಕೊಪ್ಪದ ಸರ್ವೆ ನಂ. 135ರ ವಾಯುವ್ಯ ಮೂಲೆಗೆ ಹೋಗುತ್ತದೆ, ತರುವಾಯ ಸರ್ವೆ ನಂ. 121ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸೀಮೆಯ ಘನವನ್ನೈತಿದ ಶ್ರೀಮಂ ಮಹಾರಾಜಾ ಸರ್ಕಾರದವರು, ಅಂತಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂತಾ ಜಮೀನಿನ ಯಾವ ಘಾರೆಸ್ಟು ಉತ್ಪತ್ತೀಗಾದರೂ ಯಾವ ಮನುಷ್ಯನಿಂದಾಗಲಿ ನವೂದಾಗುವ ಅಥವಾ ಅವನ ಪಕ್ಷವಾಗಿ ಇರುವದಾಗಿ ಹೇಳಿಕೊಳ್ಳುವ ಯಾವ ಹಕ್ಕುಗಳ ಇರುವಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತೀರ್ಮಾನಿಸಲು ಮತ್ತು ಮೇಲ್ಕಂಡ ರೆಗ್ಯುಲೇಷನಿನ IIನೇ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರವಾಗಿ ಅಮಲ್ ನಡಿಸಲು, ಘಾರೆಸ್ಟ್ ಅಸಿಸ್ಟೆಂಟ್ ಕ್ಲಾಸರ್ವೇಟರಾದ ಮೆ|| ಬಿ. ರಾಮಸ್ವಾಮಿ ಅಯ್ಯರ್‌ಯವರನ್ನು ಘಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿರಬೇಕೆಂದು ಮೊಕರರ್ರಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಘಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸಹಾಯಮಾಡಲು ತತ್ಕಾಲದ ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಘಾರೆಸ್ಟ್ ಆಫಿಸರರು ಸರ್ಕಾರದ ತರ್ಫನಲ್ಲಿ ಹಾಜರು ಇರಬೇಕೆಂತಲೂ ಆಜ್ಞಾಪಿಸಿರುತ್ತಾರೆ.

3. ಮತ್ತು ಸದರೀ ರೆಗ್ಯುಲೇಷನಿನ 15ನೇ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆಯ ಘನವನ್ನೈತಿದ ಶ್ರೀಮಂ ಮಹಾರಾಜಾ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೇ ಸೆಕ್ಷನ್‌ಗಳಂತೆ ಘಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯತಕ್ಕ ರೆವಿನ್ಯೂ ಇಲಾಖೆಯ ಆಫಿಸರಾಗಿರಬೇಕೆಂದು ತತ್ಕಾಲದ ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರನ್ನು ಮೊಕರರ್ರಾಡಿರುತ್ತಾರೆ.

29

ತಾರೀಖು 12ನೇ ಡಿಸೆಂಬರ್ 1902.

ನಂ. 413—3211, ಸ್ಟ 1901ನೇ ಆಗಸ್ಟ್ 31ನೇ ಮರುಕ್ಕಂ 195—949ನೇ ನಂಬರ್ ಇಸ್ತಿಹಾರ್ನಾಮೆಗೆ ಬದಲಾಗಿ 1900ನೇ ಇಸವಿಯ XIನೇ ನಂಬರ್ ಮೈಸೂರ್ ಸೀಮೆಯ ಫಾರಸ್ಟ್ ರೆಗ್ಯುಲೇಷನ್ 4ನೇ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟ್ಟಾಗಿ ವಿಸರ್ಜಿತಕ್ಕದ್ದೆಂದು ಯೋಚಿಸಿರುತ್ತೆ :—

ಷೆಡ್ಯೂಲ್.

ಜಿಲ್ಲೆಯ.	ತಾಲ್ಲೂಕು, ಹೋಬಳಿ ಇ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ಇ ಚಕ್ಕುಬಂದಿ.
ಕಡೂರು.	ಕೊಪ್ಪಾ ತಾಲ್ಲೂಕು ಯಡೆಹಳ್ಳಿ ಸಬ್ ತಾಲ್ಲೂಕು.	25ಚ ಚದರ ಮೈಲಿಗಳು.	ಈಸಕಾಲ್.	ಸ್ಥಳ.—ಪಶ್ಚಿಮಕ್ಕೆ ಬಾಳೆಹೊನ್ನೂರು—ಯಡೆಹಳ್ಳಿ ರಸ್ತೆಗೂ ಮತ್ತು ಪೂರ್ವಕ್ಕೆ ಭದ್ರಾ ನದಿಗೂ ಮಧ್ಯೆ ಕೊಪ್ಪಾ ತಾಲ್ಲೂಕಿನ ಪೂರ್ವ ಸರಹದ್ದುಗಳಲ್ಲಿರುವ ಬೆಟ್ಟದ ಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ.—ಬಾಳೆಯ ಸರ್ವೆ ನಂ. 27ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ನಂಬರಿನ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ಆಮೇಲೆ ಸರ್ವೆ ನಂ. 105ರ ಮಧ್ಯೆ ಸರ್ವೆ ನಂ. 100ರ ದಕ್ಷಿಣಪಾರ್ಶ್ವದಲ್ಲಿನ ಬಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಅದರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 101ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 104ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 104 ವ 103 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 96ರ ದಕ್ಷಿಣ ಪಾರ್ಶ್ವದಲ್ಲಿನ ಮಧ್ಯೆ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಸದರೀ ನಂಬರಿನ ಮತ್ತು ವಾರಕಾಟೆಯ ಸರ್ವೆ ನಂ. 56ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 115, 24, 49 ವ 48 ಇವುಗಳ ಪಶ್ಚಿಮ ಪಾರ್ಶ್ವಗಳ ಮತ್ತು ಸರ್ವೆ ನಂ. 40, 41, 42 ವ 43 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ 45ರ ಮಧ್ಯೆ ಸರ್ವೆ ನಂ. 75ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 75 ವ 103 ಇವುಗಳ ದಕ್ಷಿಣ ಪಾರ್ಶ್ವಗಳ ಮತ್ತು ಹೊಸ್ಸಕೊಡಗಿಯ ಸರ್ವೆ ನಂ. 32ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಯಡೆಹಳ್ಳಿ—ಚಿಕ್ಕಮಗಳೂರು ಹೈರೋಡನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಮೇಲ್ಕಂಡ ಹೈರೋಡಿನ ಉದ್ದಕ್ಕೂ ಭದ್ರಾನದಿಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಭದ್ರಾನದಿಯ ಉದ್ದಕ್ಕೂ ಅಡವಳ್ಳಿಯ ಸರ್ವೆ ನಂ. 225ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಅಡವಳ್ಳಿಯ ಅದೇ ನಂಬರ್ 225ರ ಮಧ್ಯೆ, ಸರ್ವೆ ನಂ. 227ರ ಉತ್ತರ ಪಾರ್ಶ್ವದ ಉದ್ದಕ್ಕೂ ಪುನಃ ಸರ್ವೆ ನಂ. 204ರ ಮಧ್ಯೆ ಸರ್ವೆ ನಂ. 150ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 150ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 152ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 152, 153, 154, ವ 155 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸಂಣ ಹೊಳೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಪಶ್ಚಿಮಕ್ಕೆ ತಿರಿಗಿಕೊಳ್ಳುವ ಮತ್ತು ಸರ್ವೆ ನಂ. 193ರ ಈಶಾನ್ಯ ಮೂಲೆಯನ್ನು ಮುಟ್ಟುವ ಸುಮಾರು 3 ಫರ್ಲಾಂಗುಗಳದೂರ ಮೇಲ್ಕಂಡ ಹೊಳೆಯ ಪಶ್ಚಿಮದಡದ ಉದ್ದಕ್ಕೂ ಹೋಗುತ್ತದೆ. ತರುವಾಯ ಸರ್ವೆ ನಂ. 190, 188, 187, 186, ಮತ್ತು 184 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಬಾಳೆಹೊನ್ನೂರು—ಯಡೆಹಳ್ಳಿ ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಬಾಳೆಹೊನ್ನೂರು—ಯಡೆಹಳ್ಳಿ ರಸ್ತೆಯ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

F

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮ್ಮ ಮಹಾರಾಜಾ ಸರ್ಕಾರದವರು ಅಂತಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂತಾ ಜಮೀನಿನ ಯಾವ ಫಾರೆಸ್ಟು ಉತ್ಪತ್ತೀಗಾದರೂ ಯಾವ ಮನುಷ್ಯನಿಂದಾಗಲಿ ನಮೂದಾಗುವ ಅಥವಾ ಆವನ ಪಕ್ಷವಾಗಿ ಇರುವದಾಗಿ ಜೇಳಿಕೊಳ್ಳುವ ಯಾವ ಹಕ್ಕುಗಳ ಇರುನಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತಿರ್ಮಾನಿಸಲು ಮತ್ತು ಮೇಲ್ಕಂಡ ರಗ್ಯುಲೇಷನಿನ IIನೇ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರವಾಗಿ ಅಮಲ್ ನಡಿಸಲು, ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರಾದ ಮೆ|| ಬಿ. ರಾಮಸ್ವಾಮಿ ಅಯ್ಯರ್‌ಯವರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿರಬೇಕೆಂದು ಮೊಕರರ್ರ್ಮಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸಹಾಯ ಮಾಡಲು ತತ್ಕಾಲದ ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರು ಸರ್ಕಾರದ ತರ್ಫಿನಲ್ಲಿ ಹಾಜರು ಇರಬೇಕೆಂತಲೂ, ಆಜ್ಞಾಪಿಸಿರುತ್ತಾರೆ.

3. ಮತ್ತು ಸದರೀ ರಗ್ಯುಲೇಷನಿನ 15ನೇ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮ್ಮ ಮಹಾರಾಜಾ ಸರ್ಕಾರದವರು, ಸದರೀ ರಗ್ಯುಲೇಷನಿನ 10, 11, 12, 13 ಅಥವಾ 14ನೇ ಸೆಕ್ಷನ್ಗಳಿಂತೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯುತಕ್ಕ ರೆವೆನ್ಯೂ ಇಲಾಖೆಯ ಆಫಿಸರಾಗಿರಬೇಕೆಂದು ತತ್ಕಾಲದ ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರನ್ನು ಮೊಕರರ್ರ್ಮಾಡಿರುತ್ತಾರೆ.

ಹುಕುಂ ಬಮೋಜೀಬ್,

ಜಿ. ಇ. ರಿಕೆಟ್ಸ್,

ಫಾರ್ ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ತಾರೀಖು 12ನೇ ಜನವರಿ 1903.

ನಂ. 433—3984, ಸ್ ೧೯೦೨ನೇ ಜೂ 19ನೇ ಮುಕ್ತಂ 922—4862ನೇ ನಂಬರ್ ಇಸ್ತಿಹಾರ್ನ್ಮೆಯ 2ನೇ ಪ್ಯಾರಾವನ್ನು ಬದಲಾಯಿಸೋಣದರಲ್ಲಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮ್ಮ ಮಹಾರಾಜಾ ಸರ್ಕಾರದವರು ತತ್ಕಾಲದ ಸಾಗರದ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಆಫಿಸರರನ್ನು ಸಾಗರ ತಾಲ್ಲೂಕಿನಲ್ಲಿರುವ ಯೋಚಿಸಲ್ಪಟ್ಟ ಜೋಗ್ ಫಾರೆಸ್ಟಿನ ವಿಷಯದಲ್ಲಿ ಸೆಟ್ಲ್‌ಮೆಂಟ್ ಆಫಿಸರಾಗಿರಲಿಕ್ಕೆ ಮೊಕರರ್ರ್ಮಾಡಿರುತ್ತಾರೆ.

ಹುಕುಂ ಬಮೋಜೀಬ್,

ಎಂ. ಮುತ್ತಣ್ಣ,

ಫಾರೆಸ್ಟು ಇಲಾಖೆಯ ಗವರ್ನ್‌ಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮಾ.

ತಾರೀಖು 10ನೇ ಜನವರಿ 1903.

ನಂ. 24—53, ಸ್ ೧೯೦೨ನೇ ಡಿಸೆಂಬರ್ 27ನೇ ತಾರೀಖು ಇಂಡಿಯಾ ಗೆಜೆಟ್ಟಿನ ಇದರಡೀ ಕಂಡ ಎಕ್‌ಸ್ಟ್ರಾಕ್ಕು ತಿಳುವಳಿಕೆ ಬಗ್ಯೆ ಮುಕೇ ಫಾಯಿಷ್ಮಾಡಲ್ಪಟ್ಟರುತ್ತದೆ:—

ಪಬ್ಲಿಕ್ ವರ್ಕ್ಸ್ ಇಲಾಖಾ.

ರೈಲ್ವೆಗಳು.

ಇಸ್ತಿಹಾರ್‌ನಾಮಾ.

ತಾರೀಖು 20ನೇ ಡಿಸೆಂಬರ್ 1902, ಕಲ್ಕತ್ತಾ.

ನಂ. 484, ಸ್ಟೇಟ್ ರೈಲ್ವೆಗಳಿಗೆ ಸೇರಿದ ಸೂಪರ್‌ಟೆಂಡಿಂಗ್ ಇಂಜಿನಿಯರ್ ಕ್ಲಾಸುಗಳಲ್ಲಿ ಇದರಡೀ ಕಂಡ ಬಡ್ತಿಗಳನ್ನು ನಮೂದಿಸಿದ ತಾರೀಖುಗಳಾರಭ್ಯ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಯವರು ಹುಕುಂ ಮಾಡಿರುತ್ತಾರೆ:—

ಹೆಸರು.	ಎಲ್ಲಿಂದ.	ಎಲ್ಲಿಗೆ.	ಬಡ್ತಿಯ ಸ್ವಭಾವ.	ಯಾವಲಾಗಾಯಿತು.
* ಡಬ್ಲ್ಯೂ ಮೆಕ್‌ಫರ್ಚೇ.	* ಸೂಪರ್‌ನ್ಯೂಮರರಿ ಮೊದಲನೇ ಗ್ರೇಡಿನ ಎಕ್ಸಿಕ್ಯೂಟಿವ್ ಇಂಜಿನಿಯರ್.	* ಸೂಪರ್‌ನ್ಯೂಮರರಿ ಎರಡನೇಕ್ಲಾಸಿನ ಸೂಪರ್‌ಟೆಂಡಿಂಗ್ ಇಂಜಿನಿಯರ್.	* ಹಂಗಾಮಿ.	* ರಜಾದಿಂದ ವಾಪಸ್‌ಬರುವ ತಾರೀಖಿನಾರಭ್ಯ

ಹುಕುಂ ಬಮೋಜೀಬ್,

ಜಬ್ಲ್ಯೂ. ಎಸ್. ಟ್ರೀಲ್, ಕ್ಯಾಪ್ಟರ್ನ್, ಆರ್. ಇ.,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ.